# ಡಿಪ್ಲೋಮಾ(ಪಶು ಸಂಗೋಪನೆ) ಶೈಕ್ಷಣಿಕ ಮಾಹಿತಿ/ವಿವರಣಾ ಪತ್ರಿಕೆ (Prospectus)

ಈ ಕೋರ್ಸ್‌ಗೆ ಸಂಬಂಧಪಟ್ಟಂತೆ ನಿಯಮಾವಳಿಗಳು, ಕೋರ್ಸ್‌ನ ಶೈಕ್ಷಣಿಕ ಮಾಹಿತಿ, ಪರೀಕ್ಷೆ ಮತ್ತು ಮೌಲ್ಯಮಾಪನ ಪದ್ಧತಿ ಹಾಗೂ ಶಿಸ್ತು ನಿಯಮಗಳನ್ನು ಒಳಗೊಂಡಿದ್ದು, ನೋಂದಣಿಯ ಸಮಯದಲ್ಲಿ ಅಭ್ಯರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಪತ್ರಿಕೆಯನ್ನು ಒದಗಿಸಲಾಗುವುದು.

**ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ಹಾಗೂ ಆಯ್ಕೆ:**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದ ನಿವಾಸಿಯಾಗಿದ್ದು ಒಂದರಿಂದ ಹತ್ತನೇ ತರಗತಿಯವರಿಗೆ ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿರಬೇಕು. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು. **ಗಡಿನಾಡು ಕನ್ನಡಿಗರೂ ಕೂಡಾ ಅರ್ಹರಿರುತ್ತಾರೆ.**

**ಸೀಟುಗಳ ಮೀಸಲಾತಿ:**

ಅಭ್ಯರ್ಥಿಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗಳಿಗೆ ಆಯ್ಕೆ ಮಾಡುವಾಗ ಈ ಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.

I. ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಸರಕಾರದ ಆದೇಶ ನಂ. ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31.01.1995 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆ ಎಸ್.ಸಿ, ಎಸ್.ಟಿ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.

**ಟಿಪ್ಪಣಿ –1:** ಸರಕಾರಿ ಆದೇಶ ನಂ. ಎಸ್‌ಡಬ್ಲೂಎಲ್/225/ಬಿಸಿಎ/2000 ದಿ. 30.03.2002 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಈ ಕೆಳಗಿನ ಅಭ್ಯರ್ಥಿಗಳು 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಲ್ಲಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ.

1. ಮೇಲಿನ ಸರಕಾರಿ ಆದೇಶದ ಐಟಂ–1 ರಡಿಯಲ್ಲಿ ನಮೂದಿಸಿದ ವ್ಯಕ್ತಿಗಳ ಮಗ/ಮಗಳು.
2. ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳಲ್ಲಿ ಎ–ಶ್ರೇಣಿ, ಬಿ–ಶ್ರೇಣಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಮಗ/ಮಗಳು ಅಥವಾ ಖಾಸಗಿ ಸಂಸ್ಥೆಯಲ್ಲಿ ಬಿ–ಶ್ರೇಣಿ ಹುದ್ದೆ ಅಧಿಕಾರಿಯ ವೇತನಕ್ಕೆ ಸಮನಾಗಿ (ರೂ. 43100–83900 ವೇತನ ಶ್ರೇಣಿ) ವೇತನ ಹೊಂದಿರುವ ವ್ಯಕ್ತಿಯ ಮಗ/ಮಗಳು.
3. ಅಭ್ಯರ್ಥಿಯ ಹಾಗೂ ತಂದೆ–ತಾಯಿ/ಪೋಷಕರ ವಾರ್ಷಿಕ ಆದಾಯವು ರೂ. 8.0 ಲಕ್ಷಕ್ಕಿಂತಲೂ ಮೀರಿದ್ದರೆ, ಅಭ್ಯರ್ಥಿಯು ಹಾಗೂ ತಂದೆ/ತಾಯಿ/ಪೋಷಕರು ಕರ್ನಾಟಕ ಜಮೀನು ಪರಿಷ್ಕರಣೆ ಕಾಯಿದೆ 1961 ರಲ್ಲಿ ನಿಗದಿ ಪಡಿಸಿದಂತೆ 10 ಯೂನಿಟ್ ಕೃಷಿ ಜಮೀನು ಹೊಂದಿದ್ದರೆ ಹಾಗೂ 20 ಎಕರೆಗಿಂತಲೂ ಹೆಚ್ಚಿನ ಪ್ಲಾಂಟೇಶನ್ ಜಮೀನು ಹೊಂದಿದ್ದರೆ.
4. ಕಲ್ಯಾಣ–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಪ್ರವೇಶಾತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

5. ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ(ಎನ್.ಸಿ.ಸಿ/ಕ್ರೀಡೆ/ಸ್ಕೌಟ್ಸ್&ಗೈಡ್ಸ್/ಡಿಫೆನ್ಸ್/ಮಾಜಿ ಸೈನಿಕ/ಅಂಗವಿಕಲ/ಆಂಗ್ಲೋ ಇಂಡಿಯನ್ ಇವುಗಳಿಗೆ ಮೀಸಲಾತಿ ನೀಡಲಾಗುವುದು.

**ಟಿಪ್ಪಣಿ:**-2 ಈ ಮೇಲಿನ ಗುಂಪುಗಳಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ-3:** ಎಸ್.ಸಿ./ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳಲ್ಲಿ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ) ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ-4:** ವರ್ಟಿಕಲ್ ಮೀಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮೀಸಲಾತಿ ಸೀಟುಗಳನ್ನು "ಸಾಮಾನ್ಯ ವರ್ಗ"ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

**ಪ್ರವೇಶಕ್ಕೆ ಅರ್ಜಿ:**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಜಾಲತಾಣ **www.kvafsu.edu.in** ದಲ್ಲಿ ಪಡೆಯಬಹುದು. ಸಂಪೂರ್ಣವಾಗಿ ಭರ್ತಿಮಾಡಿದ ಅರ್ಜಿಯನ್ನು **"ಕುಲಸಚಿವರು,** ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ-585 226. ಇವರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

**ಪ್ರವೇಶ ವಿಧಾನ:**

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರಕಾರದ ಮೀಸಲಾತಿ ಆದೇಶದಂತೆ ಹಾಗೂ ಮೆರಿಟ್ ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು.

**ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ನ ಶುಲ್ಕದ ವಿವರ:**

ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಗಿನಂತೆ ಸಂಬಂಧಪಟ್ಟ ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ಗೆ ನಿಗದಿಪಡಿಸಿದ ಶುಲ್ಕವನ್ನು ಪ್ರವೇಶದ ದಿನದಂದು ಪಾವತಿ ಮಾಡಬೇಕು.

**ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:**

- ಪ್ರವೇಶದ ವಿವರಣಾ ಪತ್ರಿಕೆ (prospectus)ಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಅರ್ಜಿಯ ಎಲ್ಲ ವಿವರಗಳನ್ನು ತಿಳಿದಿರಬೇಕು ಹಾಗೂ ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಸೂಕ್ತ ದಾಖಲೆಗಳ ಪ್ರತಿಗಳನ್ನು ಲಗತ್ತಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.